ಅಧ್ಯಕ್ಷರು:- ಅವರವರ ಅನುಭವ ಅವರವರದು. ನನಗೆ ಈಗಾಗಲೇ 5-6 ಜನ ಸ್ನೇಹಿತರು ಹೇಳಿದ್ದಾರೆ. ಶ್ರೀರಾಮ ರೆಡ್ಡಿಯವರು ಅವರ ಕ್ಷೇತ್ರದಲ್ಲಿ ಡಕಾಯಿತಿ ಆಗಿದೆ; ಅದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿದ್ದಾರೆ. Like this other members want to raise certain things. We will ask each member to conclude just within 2 minutes. They are all from Opposition only. No one is from ruling party.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ My worry is the important issue may get deviated.

MR. SPEAKER:- Not at all. We will conclude this within 10 minutes. We will take up the issue after this. How we should adjust the timings, we all sit together and decide.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸರ್ಕಾರ ಆಕ್ಷೇಪಣೆ ಮಾಡಿದ್ದರೆ ನಾವು ಹಠ ಹಿಡಿಯಬೇಕಾಗಿತ್ತು. ಆದರೆ ತಾವು ಹೇಳಿದ ಮೇಲೆ ನಾವು ಕುಳಿತುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ನಿಮ್ಮ ಜವಾಬ್ದಾರಿ ಬಗ್ಗೆ ನನಗೆ ಅರಿವು ಇದೆ. ನಾನೂ ಕೂಡ ನಿಮ್ಮ ಜೊತೆ ಸಹಕರಿಸುತ್ತೇನೆ. I will ask the members not to prolong. Each one of them may finish in two minutes. Now, Mr. Suresh Kumar.

ವಿಷಯ:- ಆ. ಬ್ರಿಗೇಡ್ ರಸ್ತೆಯಲ್ಲಿ ವಾಹನ ನಿಲುಗಡೆಗೆ ಅವಕಾಶ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, 9ನೇ ತಾರೀಖು ಗೃಹ ಖಾತೆಯ ರಾಜ್ಯ ಸಚಿವರು ಮತ್ತು ನಾನು ಶೃತಿ ಕೇಬಲ್ ಇಂಟರ್‌ವ್ಯೂನಲ್ಲಿದ್ದಾಗ, ಮಾನ್ಯ ಗೃಹ ಸಚಿವರು ಹೇಳಿದರು, ಬೆಂಗಳೂರಿನ ವಾಹನ ಸಂಚಾರದ ಬಗ್ಗೆ ಒಂದು ಕ್ರಮ ಕೈಗೊಳ್ಳುತ್ತಿದ್ದೇವೆ. ಅದರಲ್ಲೂ ಬಹಳ ಪ್ರಮುಖವಾಗಿ ಬ್ರಿಗೇಡ್ ರಸ್ತೆಯಲ್ಲಿ ಯಾವುದೇ ವಾಹನ ನಿಲುಗಡೆದ ಅವಕಾಶ ಕೊಡುವುದಿಲ್ಲ; ಸಾರ್ವಜನಿಕರಿಂದ ಅದಕ್ಕೆ ಪ್ರೋತ್ಸಾಹಕರ ಪ್ರತಿಕ್ರಿಯೆ ಬಂದಿದೆ ಎಂದು ಹೇಳಿದರು. ಒಂದು ತಿಂಗಳಾದ ಮೇಲೆ ನಾನು ಕೂಡ ಹೋಗಿ ನೋಡಿದೆ. ಅಲ್ಲಿ ಬಹಳ ಚೆನ್ನಾಗಿ ವಾಹನ ಸಂಚಾರ ನಡೆಯುತ್ತಿತ್ತು, ಇವತ್ತು ಇದ್ದಕ್ಕಿದ್ದ ಹಾಗೆ ಆ ನೋಟಿಫೀಕೇಷನ್‌ನನ್ನು ರದ್ದುಗೊಳಿಸಿ ಯಾರದೋ ಒತ್ತಡಕ್ಕೆ ಒಳಗಾಗಿ ಅಲ್ಲಿ ಪುನಃ ವಾಹನ ನಿಲುಗಡೆಗೆ ಅವಕಾಶ ಕೊಟ್ಟಿದ್ದಾರೆ. ಇದಕ್ಕೆ ಕಾರಣ ಕೊಡಬೇಕು. ಒಂದು ತಿಂಗಳ ನಂತರ ಏತಕ್ಕೆ ಈ ಪರಿವರ್ತನೆ ಆಯಿತು. ಮಾನ್ಯ ಗೃಹ ಸಚಿವರೇ ಸ್ವತಃ ಒಪ್ಪಿಕೊಂಡು ನಗರದ ವಾಹನ ಸಂಚಾರಕ್ಕೆ ಉಪಯುಕ್ತ ಕ್ರಮವನ್ನು ನಾನು ತೆಗೆದುಕೊಂಡಿದ್ದೇನೆ ಎಂದು ಹೇಳಿದ ಬಳಿಕ ಇವತ್ತು ಇದ್ದಕ್ಕಿದ್ದ ಹಾಗೆ ಯಾರದೋ ಪ್ರಭಾವಕ್ಕೆ, ಒತ್ತಡಕ್ಕೆ ಒಳಗಾಗಿ ಇವತ್ತಿನಿಂದ ವಾಹನ ನಿಲುಗಡೆಗೆ ಅವಕಾಶ ಕೊಟ್ಟಿದ್ದೀರಿ. ದಯವಿಟ್ಟು ಅಲ್ಲಿ ವಾಹನ ನಿಲುಗಡೆಗೆ ಅವಕಾಶ ಕೊಡಬೇಡಿ. ಬ್ರಿಗೇಡ್ ರಸ್ತೆಯಲ್ಲಿ ಓಡಾಡುವುದು ಬಹಳ ಕಷ್ಟ. ಶಿವಾಜಿನಗರದಿಂದ ನಗರದ ಮಧ್ಯ ಭಾಗಕ್ಕೆ ಬರುವುದಕ್ಕೆ ಬಹಳ ಮುಖ್ಯವಾಹಿನಿ ಆ ರಸ್ತೆ. ದಯವಿಟ್ಟು ಮಾನ್ಯ ಗೃಹ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ರೋಷನ್ ಬೇಗ್ (ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಬ್ರಿಗೇಡ್ ರಸ್ತೆಯಲ್ಲಿ ಜನರಿಗೆ ತೊಂದರೆಯಾಗುತ್ತದೆಂದು ನಾವು ವಾಹನ ನಿಲುಗಡೆಯನ್ನು ಬ್ಯಾನ್ ಮಾಡಿದ್ದೆವು. ಅಲ್ಲಿಯ ಅಂಗಡಿಯವರಿಗೆ ಹಾಗು ಜನರಿಗೆ ತೊಂದರೆಯಾಗುತ್ತದೆ ಎಂದು ನಾವು ಈ ಕ್ರಮವನ್ನು ಕೈಗೊಂಡಿದ್ದೆವು. ಈ ಬಗ್ಗೆ ಕೆಲವರು ನಮಗೆ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂದು ಸಹ ಪತ್ರ ಬರೆದಿದ್ದರು. ಮತ್ತೊಂದು ಕಡೆ ಷಾಪ್ ಕೀಪರ್ಸ್ ನಮಗೆ ಇದರಿಂದ ತೊಂದರೆಯಾಗುತ್ತಿದೆ, ಯಾರು ಷಾಪ್‌ಗೆ ಬರುತ್ತಾರೆ ಅವರಿಗೆ ತೊಂದರೆ ಆಗುತ್ತದೆ. ಆದ್ದರಿಂದ ಎನಾದರೂ ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಿ ಎಂದು ಮನವಿ ಮಾಡಿದರು. ಆಲ್ಟರ್‌ನೇಟಿವ್ ಅರೇಂಜ್‌ಮೆಂಟಿಗೆ ನಾವು ಒಪ್ಪುತ್ತೇವೆಂದು ಹೇಳಿ ಅದಕ್ಕೆ ಸ್ವಲ್ಪ ಬದಲಾವಣೆ ಮಾಡಿದ್ದೇವೆ.

ಇ. **ಬಾಗೇಪಲ್ಲಿ ತಾಲ್ಲೂಕಿನಲ್ಲಿ ನಡೆದ ದರೋಡೆ ಪ್ರಕರಣ.**

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಇತ್ತೀಚೆಗೆ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿವೆ. ಕಳೆದ 3ನೇ ತಾರೀಖು ವೈದ್ಯರೊಬ್ಬರ ಮನೆಯಲ್ಲಿ ದರೋಡೆ ಆಯಿತು. ಸುಮಾರು 3-4 ಲಕ್ಷ ರೂಪಾಯಿಗಳ ಆಸ್ತಿಯನ್ನು ದೋಚಿಕೊಂಡು ಹೋದರು. 10ನೇ ತಾರೀಖು ರಾತ್ರಿ 9ಗಂಟೆ ಸಮಯದಲ್ಲಿ ವ್ಯಾಪಾರ ಆದಮೇಲೆ ಅಂಗಡಿ ಬಾಗಿಲು ಹಾಕಿಕೊಂಡು ಹೋಗುತ್ತಿದ್ದ ತಂದೆ ಮತ್ತು ಮಗಳ ಮೇಲೆ ಹಲ್ಲೆ ಮಾಡಿ, ಬಾಂಬ್ ಹಾಕಿ ಅವರನ್ನು ತಿವಿದು ದರೋಡೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಘಟನೆಗಳು ನನ್ನ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿವೆ. 6 ತಿಂಗಳಿಂದ ನಾನು ಮಾನ್ಯ ಗೃಹ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಇಡೀ ಪೋಲೀಸ್ ಸಿಬ್ಬಂದಿಯನ್ನು ಅಲ್ಲಿಂದ ಬದಲಾವಣೆ ಮಾಡಬೇಕು.

ಅಧ್ಯಕ್ಷರು:- ಎಲ್ಲಾ ಕ್ಷೇತ್ರಗಳಲ್ಲಿ ಮಾಡಿಸಬೇಕೆಂದು ಹೇಳುತ್ತೀರೋ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ದರೋಡೆ ವಿಕೇಂದ್ರೀಕರಣದ ಬಗ್ಗೆ ನಾನು ಹೇಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿವೆ. ಅದಕ್ಕೆ ಒಂದು ಕಾರಣ ಇದೆ. ಅದು ಆಂಧ್ರದ ಗಡಿಗೆ ಹೊಂದಿಕೊಂಡಿರತಕ್ಕ ತಾಲ್ಲೂಕು. ಆಂಧ್ರದಲ್ಲಿ ಆರ್ಯಾಕ್ ಬ್ಯಾನ್ ಆಗಿರುವುದರಿಂದ ಎಲ್ಲಾ ಜನರು ಇಲ್ಲಿಗೆ ಬರುತ್ತಾರೆ. ಹೀಗಾಗಿ ಅಲ್ಲಿ ಕಾನೂನು ವ್ಯವಸ್ಥೆ ಬಹಳ ಹದಗೆಡುತ್ತಿದೆ.

12.40 ಪಿಎಂ.

ಆಂಧ್ರದಲ್ಲಿ ಆರ್ಯಾಕ್ ಬ್ಯಾನ್ ಆಗಿರುವುದರಿಂದ ಎಲ್ಲಾ ಜನರು ಅಲ್ಲಿಗೆ ಬರುತ್ತಾರೆ. ಮತ್ತೆ ನಕ್ಸಲೈಟ್ಸ್ ತಾಲ್ಲೂಕು ಅದು. ಹೀಗಾಗಿ ಕಾನೂನು ವ್ಯವಸ್ಥೆ ಭಾರೀ ಹದಗೆಡುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ತಾಲ್ಲೂಕಿನ ಪರಿಚಯ ನಮಗೆ ಆಗಲಿಲ್ಲ.

ಅಧ್ಯಕ್ಷರು:- ನಮ್ಮಲ್ಲಿ ಡಕಾಯಿತಿ ಇಲ್ಲ.